ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

**ಪತ್ರಿಕಾ ತುಣುಕುಗಳು**

**PAPER CLIPPINGS**

2

ಇಲಾಖೆ / ವಿಷಯ : DEPARTMENT / SUBJECT: ವಿಧಾನ ಪರಿಷತ್ತು ಅಧಿವೇಶನ

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ ದಿನಾಂಕ : DATE : 3/2/2021

# ಸಭಾಪತಿ ವಿರುದ್ಧ ಅವಿಶ್ವಾಸ ನಿರ್ಣಯ ಮಂಡನೆ

ಉವಾ 3/2/21

**ಬೆಂಗಳೂರು:** ವಿಧಾನ ಪರಿಷತ್ ಸಭಾಪತಿ ಕೆ. ಪ್ರತಾಪ್ ಚಂದ್ರ ಶೆಟ್ಟಿ ವಿರುದ್ಧ ಅವಿಶ್ವಾಸ ನಿರ್ಣಯ ಮಂಡನೆಗೆ ಸಭಾಪತಿಯವರು ಅವಕಾಶ ಕಲ್ಪಿಸಿರುವ ಹಿನ್ನೆಲೆಯಲ್ಲಿ ಬಿಜೆಪಿ ಸದಸ್ಯ ಆಯನೂರು ಮಂಜುನಾಥ್ ಅವಿಶ್ವಾಸ ನಿರ್ಣಯ ಮಂಡಿಸಿದರು.

ಬಿಜೆಪಿ ಸದಸ್ಯರು ಮಂಡಿಸಿದ್ದ ಅವಿಶ್ವಾಸ ನಿರ್ಣಯ ಸಂಬಂಧ ಮಂಗಳವಾರ ಭೋಜನ ವಿರಾಮದ ನಂತರ ಕಲಾಪ ಆರಂಭವಾಗುತ್ತಿದ್ದಂತೆ ಸಭಾಪತಿ ಕೆ.ಪ್ರತಾಪ ಚಂದ್ರ ಶೆಟ್ಟಿಯವರು ವಿಧಾನ ಪರಿಷತ್‌ನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮದಡಿಯಲ್ಲಿ ಸಭಾಪತಿ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಲು ಸದನದ ಅನುಮತಿ ಕೋರಿದರು. ಅದರಂತೆ ಆಯನೂರು ಮಂಜುನಾಥ್ ನಿರ್ಣಯ ಮಂಡಿಸಿದರು. ನಿರ್ಣಯದ ಪರವಾಗಿ ಕನಿಷ್ಠ 10 ಸದಸ್ಯರಾದರೂ ಇರಬೇಕು ಎಂದು ಸಭಾಪತಿಗಳು ಹೇಳುತ್ತಿದ್ದಂತೆ ಬಿಜೆಪಿ ಹಾಗೂ ಜೆಡಿಎಸ್ ಸದಸ್ಯರು ಎದ್ದುನಿಂತು ನಿರ್ಣಯ ಅಂಗೀಕರಿಸಿದರು.

ಅದರಂತೆ ಸಭಾಪತಿಯವರು ನಿರ್ಣಯವು ಚರ್ಚೆಗೆ ಅಂಗೀಕಾರವಾಗಿದೆ. ಐದು ದಿನದಲ್ಲಿ ಯಾವಾಗಾದರೂ ಚರ್ಚೆಗೆ ತೆಗೆದುಕೊಳ್ಳಲಾಗುತ್ತದೆ ಎಂದು ಹೇಳಿ, ಕಲಾಪ ಮುಂದುವರಿಸಿದರು. ಮಧ್ಯಾಹ್ನದ ಕಲಾಪದ ಅಂತ್ಯದ ವೇಳೆ ಆಯನೂರು ಮಂಜುನಾಥ, ಅವಿಶ್ವಾಸ ನಿರ್ಣಯದ ಚರ್ಚೆ ದಿನಾಂಕ ಪ್ರಕಟಿಸಬೇಕು ಎಂದು ಪೀಠಕ್ಕೆ ಮನವಿ ಮಾಡಿದರು. ಆಗ ಸಭಾಪತಿ, ಯಾವಾಗ ಚರ್ಚೆಗೆ ಬರಲಿದೆ ಎಂಬುದನ್ನು ಅಜೆಂಡಾದಲ್ಲಿ ತಿಳಿಸಲಾಗುತ್ತದೆ ಎಂದರು. ಈ ವೇಳೆ ಆಡಳಿತ ಪಕ್ಷ ಹಾಗೂ ಪ್ರತಿಪಕ್ಷದ ನಡುವೆ ವಾಗ್ವಾದ ನಡೆಯಿತು. ನಂತರ ಸಚಿವ ಕೆ.ಎಸ್. ಈಶ್ವರಪ್ಪ, ನೀವು ಯಾವಾಗ ಬೇಕೋ ಆವಾಗ ಈ ವಿಷಯ ಚರ್ಚೆಗೆ ತನ್ನಿ ಎಂದು ಮನವಿ ಮಾಡಿದರು. ನಂತರ ಕಲಾಪ ಮುಂದುವರಿಯಿತು.

ಜನವರಿ 18ರಂದು ಬಿಜೆಪಿ ಸದಸ್ಯರಾದ ಆಯನೂರು ಮಂಜುನಾಥ್, ಡಾ ತಳವಾರ ಸಾಬಣ್ಣ, ಅರುಣ್ ಶಹಾಪುರ, ಎಸ್.ವಿ.ಸಂಕನೂರು, ಮುಖ್ಯಸಚೇತಕ ಮಹಾಂತೇಶ್ ಕವಟಗಿಮಠ, ನಿರಾಣಿ ಹನುಮಂತ ರುದ್ರಪ್ಪ ಹಾಗೂ ಇತರೆ ಸದಸ್ಯರು ಪರಿಷತ್ ನಿಯಮ 165 ಹಾಗೂ ಭಾರತ ಸಂವಿಧಾನದ 183 ನೇ ಅನುಚ್ಛೇದ ಸಿ ಖಂಡದಡಿ ಸಭಾಪತಿ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಿದರು. ಸಭಾಪತಿ ಪ್ರತಾಪ್ ಚಂದ್ರ ಶೆಟ್ಟಿ ಅವರನ್ನು ಆ ಸ್ಥಾನದಿಂದ ತೆಗೆದು ಹಾಕಬೇಕು ಎಂದು ನಿರ್ಣಯದಲ್ಲಿ ತಿಳಿಸಿದ್ದರು.